# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 896 (1013) |
| 2 | ಸದಸ್ಯರ ಹೆಸರು | : | ಶ್ರೀ ಟಿ.ಎನ್. ಜವರಾಯಿ ಗೌಡ<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ: | : | 12-03-2026 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಗ್ರೇಟರ್ ಬೆಂಗಳೂರು ಅಥಾರಿಟಿಗೆ ಸೇರಿದ ಐದು ಬೆಂಗಳೂರು ಮಹಾನಗರ ಪಾಲಿಕೆಗಳಲ್ಲಿ ಇಲ್ಲಿಯವರೆಗೂ ಎಷ್ಟು ಆಸ್ತಿಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ; (ಪಾಲಿಕೆವಾರು ಮಾಹಿತಿ ಒದಗಿಸುವುದು)</td><td>ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿನ ಐದು ಬೆಂಗಳೂರು ನಗರ ಪಾಲಿಕೆಗಳಲ್ಲಿ ದಿನಾಂಕ:27-2-2026 ರವರೆಗೆ ಡಿಜಿಟಲೀಕರಣಗೊಳಿಸಲಾಗಿರುವ ಆಸ್ತಿಗಳ ವಿವರ :
<table>
<tr><th>ಕ್ರ.ಸಂ</th><th>ಪಾಲಿಕೆ</th><th>ಡಿಜಿಟಲೀಕರಣಗೊಳಿಸಿದ ಆಸ್ತಿಗಳ ಸಂಖ್ಯೆ</th></tr>
<tr><td>1</td><td>ಬೆಂಗಳೂರು ಕೇಂದ್ರ</td><td>3,36,397</td></tr>
<tr><td>2</td><td>ಬೆಂಗಳೂರು ಪೂರ್ವ</td><td>4,62,105</td></tr>
<tr><td>3</td><td>ಬೆಂಗಳೂರು ಪಶ್ಚಿಮ</td><td>6,92,715</td></tr>
<tr><td>4</td><td>ಬೆಂಗಳೂರು ಉತ್ತರ</td><td>5,29,368</td></tr>
<tr><td>5</td><td>ಬೆಂಗಳೂರು ದಕ್ಷಿಣ</td><td>4,93,790</td></tr>
<tr><td colspan="2">ಒಟ್ಟು</td><td>25,14,375</td></tr>
</table>
</td></tr>
<tr><td>ಆ)</td><td>ಇ-ಖಾತಾ ಅಭಿಯಾನದಡಿ ಇಲ್ಲಿಯವರೆಗೂ ಎ-ಖಾತಾಗಾಗಿ ಸಾರ್ವಜನಿಕರಿಂದ ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ ಎಷ್ಟು; ಸ್ವೀಕರಿಸಿದ ಅರ್ಜಿಗಳಲ್ಲಿ ಎ-ಖಾತಾ ನೀಡಿರುವ ಸಂಖ್ಯೆ ಎಷ್ಟು; (ಪಾಲಿಕೆವಾರು ಮಾಹಿತಿ ಒದಗಿಸುವುದು)</td><td>ಈಗಾಗಲೇ ಭೌತಿಕವಾಗಿ ಲಭ್ಯವಿದ್ದ 'ಎ' ಮತ್ತು 'ಬಿ' ಖಾತಾಗಳಿಗೆ ಇ-ಖಾತಾ ಅಭಿಯಾನದ ಅಡಿ ಇ-ಖಾತಾ ನೀಡಲಾಗುತ್ತಿದೆ. ಅದರಂತೆ ಇ-ಖಾತಾ ಕೋರಿ ದಿನಾಂಕ :04-03-2026ರವರೆಗೆ ಒಟ್ಟು 9,63,076 ಅರ್ಜಿಗಳು ಸ್ವೀಕೃತಗೊಂಡಿರುತ್ತವೆ. ಇವುಗಳಲ್ಲಿ ನಮೂನೆ-ಎ ಇ-ಖಾತಾವನ್ನು 5,51,718 ಅರ್ಜಿಗಳಿಗೆ, ನಮೂನೆ-ಬಿ ಇ-ಖಾತಾವನ್ನು 2,72,590 ಅರ್ಜಿಗಳಿಗೆ ವಿತರಿಸಲಾಗಿದ್ದು, ಒಟ್ಟು 1,31,282 ಅರ್ಜಿಗಳು ತಿರಸ್ಕರಿಸಿದ್ದು- ಹೀಗೆ ಒಟ್ಟಾರೆ ವಿಲೇವಾರಿ 9,55,590 ಆಗಿರುತ್ತದೆ. (ಶೇ.99.22). ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ ಮತ್ತು ನಮೂನೆ-ಎ ಇ-ಖಾತಾ ವಿತರಿಸಿದ ಅರ್ಜಿಗಳ ಸಂಖ್ಯಾ ಮಾಹಿತಿ ಈ ಕೆಳಗಿನಂತಿದೆ :</td></tr>
</table>

<table>
<tr>
<td></td>
<td></td>
<td>
<table>
<tr><th>ಕ್ರ. ಸಂ</th><th>ನಗರ ಪಾಲಿಕೆ</th><th>ಸ್ವೀಕರಿಸ ಲಾಗಿರುವ ಅರ್ಜಿಗಳ ಸಂಖ್ಯೆ</th><th>ನಮೂನೆ-ಎ ಇ-ಖಾತಾ ವಿತರಿಸಿರುವ ಅರ್ಜಿಗಳ ಸಂಖ್ಯೆ</th></tr>
<tr><td>1</td><td>ಬೆಂಗಳೂರು ಕೇಂದ್ರ</td><td>79,609</td><td>62,226</td></tr>
<tr><td>2</td><td>ಬೆಂಗಳೂರು ಪೂರ್ವ</td><td>1,64,650</td><td>69,941</td></tr>
<tr><td>3</td><td>ಬೆಂಗಳೂರು ಪಶ್ಚಿಮ</td><td>3,03,761</td><td>1,75,603</td></tr>
<tr><td>4</td><td>ಬೆಂಗಳೂರು ಉತ್ತರ</td><td>2,06,667</td><td>1,21,525</td></tr>
<tr><td>5</td><td>ಬೆಂಗಳೂರು ದಕ್ಷಿಣ</td><td>2,08,389</td><td>1,22,423</td></tr>
<tr><td></td><td>ಒಟ್ಟು</td><td>9,63,076</td><td>5,51,718</td></tr>
</table>
</td>
</tr>
<tr>
<td>ಇ)</td>
<td>ಎ-ಖಾತೆಗಾಗಿ ಅರ್ಜಿ ಸ್ವೀಕರಿಸಿದ ಇಂತಿಷ್ಟು ದಿನಗಳೊಳಗಾಗಿ ಖಾತಾ ವಿತರಣೆ ಮಾಡಲು ಸಮಯವನ್ನು ನಿಗದಿಪಡಿಸಲಾಗಿದೆಯೇ; ಹಾಗೂ ನಿಗದಿಪಡಿಸಿದ ಅವಧಿಯೊಳಗೆ ಖಾತೆ ವಿತರಣೆ ಮಾಡದ ಅಧಿಕಾರಿ/ನೌಕರರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರಣೆ ನೀಡುವುದು)</td>
<td>ನಮೂನೆ-ಎ ಇ-ಖಾತಾಗಾಗಿ ಅರ್ಜಿ ಸಲ್ಲಿಸಿದ 8 ದಿನಗಳ ಒಳಗಾಗಿ ವಿತರಣೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ, ಸ್ವೀಕರಿಸಲಾದ ಅರ್ಜಿಗಳನ್ನು ಸರಾಸರಿ ಮೂರು ದಿನಗಳ ಒಳಗಾಗಿ ವಿಲೇವಾರಿ ಮಾಡಲಾಗುತ್ತಿರುತ್ತದೆ.</td>
</tr>
</table>

**ಸಂಖ್ಯೆ:ನಅಇ 100 ಬಿಬಿಎಸ್ 2026**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**